ವಿಷಯ: ಶ್ರೀ ಜೆ.ಸಿ. ಮಾಧುಸ್ವಾಮಿ ಮತ್ತು ಇತರರು ಹಕ್ಕುಚ್ಯುತಿ ಸೂಚನೆ ನೀಡಿ ಇಸ್ಕಾನ್ ಸಂಸ್ಥೆಯ ಬಿಸಿಯೂಟ ಕಾರ್ಯಕ್ರಮ ಹಾಗೂ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸುತ್ತೇವೆಂದು ಹೇಳಿ ತನಿಖೆ ನಡೆಸದಿರುವ ಬಗ್ಗೆ ಹಕ್ಕುಚ್ಯತಿ ಮಂಡನೆ ಬಗ್ಗೆ ತೀರ್ಪು:

ಉಪಾಧ್ಯಕ್ಷರು: ದಿನಾಂಕ 1-8-2007ರ ಗುರುವಾರದಂದು ವಿಧಾನ ಸಭೆ ಸದಸ್ಯರುಗಳಾದ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಜಿ.ವಿ ಶ್ರೀರಾಮರೆಡ್ಡಿ ಹಾಗೂ ಶ್ರೀ ಕೆ. ಜಯಪ್ರಕಾಶ ಹೆಗ್ಡೆ ಅವರು ಹಕ್ಕುಚ್ಯುತಿ ಸೂಚನೆಯನ್ನು ನೀಡಿ ಸದರಿ ಸೂಚನೆಯಲ್ಲಿ ದಿನಾಂಕ 13-4-2007ರಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಗೃಹ ಸಚಿವರು ವಿಧಾನ ಸಭೆಯಲ್ಲಿ ಉತ್ತರ ನೀಡುತ್ತಾ ಇಸ್ಕಾನ್ ಸಂಸ್ಥೆಯ ಬಿಸಿಯೂಟ ಕಾರ್ಯಕ್ರಮ ಹಾಗೂ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ ಸಭೆಯ ಮುಂದೆ ತಿಳಿಸುವುದಾಗಿ ಹೇಳಿದ್ದಾರೆ. ಆದರೆ ಈ ಬಗ್ಗೆ ಯಾವುದೇ ತನಿಖೆ ನಡೆಸದೆ ಸರ್ಕಾರ ಏಕಾಏಕಿ ಈ ಸಂಸ್ಥೆಗೆ ಮಕ್ಕಳ ಸಂಖ್ಯೆಯನ್ನು ಜಾಸ್ತಿ ಮಾಡಿರುವುದಲ್ಲದೆ ಜೈಲಿನಲ್ಲಿರುವ ಖೈದಿಗಳಿಗೆ ಅದೇ ಸಂಸ್ಥೆಯಿಂದ ಜೈಲಿನ ಮ್ಯಾನ್ಯುಲ್ ವಿರುದ್ಧವಾದ ಊಟದ ವ್ಯವಸ್ಥೆ ಮಾಡಿದ್ದು ಹಾಗೂ ಗೃಹ ಸಚಿವರು ಇಸ್ಕಾನ್ ದೇವಾಸ್ಥಾನದ ಮುಖ್ಯಸ್ಥರ ಜೊತೆಗೆ ಕುಳಿತು ಟೀಕೆಗಳಿಗೆ ಇತಿಶ್ರಿ ಹಾಡಿರುವ ರೀತಿಯಲ್ಲಿ ಮಾತನಾಡಿರುವುದು ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವುದರಿಂದ ಇದು ಸದನದ ಹಕ್ಕುಚ್ಯುತಿ ಹಾಗೂ ನಿಂದನೆಯಾಗುತ್ತದೆಂದು ತಿಳಿಸಿದರು. ಸದರಿ ಹಕ್ಕುಚ್ಯುತಿ ಬಗ್ಗೆ ದಿನಾಂಕ 6-8-2007ರಂದು ಸದನದಲ್ಲಿ ಸದರಿ ಸದಸ್ಯರು ಪುನಃ ಪ್ರಸ್ತಾಪಿಸಿದ್ದಾರೆ.

ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಗೃಹ ಸಚಿವರು ಸದರಿ ವಿಚಾರದಲ್ಲಿ ಹಕ್ಕುಚ್ಯುತಿ ಆಗಿಲ್ಲವೆಂದು ತಿಳಿಸುತ್ತಾ ಇದೇ ಪೀಠದ ಮೂಲಕ ಇದೇ ಸದನದಲ್ಲಿ ಅನೇಕ ತೀರ್ಪುಗಳನ್ನು ಸಭಾಧ್ಯಕ್ಷರು ಕೊಟ್ಟಿರುವುದನ್ನು ಉಲ್ಲೇಖಿಸಿದ್ದರು. ಮುಂದುವರೆದು ಇದು ಬಿಸಿಯೂಟ ಕಾರ್ಯಕ್ರಮವಲ್ಲ, ಇದು ಖೈದಿಗಳಿಗೆ ಕೊಡವಂತಹ ಒಂದು ಸಿಹಿ ಊಟದ ಕಾರ್ಯಕ್ರಮ. ಬಿಸಿಯೂಟ ಕಾರ್ಯಕ್ರಮದಲ್ಲಿ ಸರ್ಕಾರ ಬಾಣಸಿಗರನ್ನು ನೇಮಕ ಮಾಡಿಕೊಳ್ಳುತ್ತದೆ. ಜೈಲಿನಲ್ಲಿ ಆಹಾರವನ್ನು ತಯಾರು ಮಾಡುವುದಕ್ಕೆ ಅಲ್ಲಿ ಪರಿಣಿತರಾಗಿರುವ ಖೈದಿಗಳನ್ನೆ ಉಪಯೋಗಿಸಿಕೊಳ್ಳುತ್ತೇವೆ. ಹಕ್ಕುಚ್ಯುತಿ ಆಗಬೇಕಾಗಿದ್ದರೆ ಇಲ್ಲಿ ಯಾವ ಬಾಣಸಿಗರು ಕೂಡ ನಿರುದ್ಯೋಗಿಗಳಾಗುವುದಿಲ್ಲ. ಬಿಸಿ ಊಟದ

ಕಾರ್ಯಕ್ರಮಕ್ಕೂ ಸರ್ಕಾರ ತೆಗೆದುಕೊಂಡಿರುವ ನಿರ್ಣಯಕ್ಕೂ ಏನು ಸಂಬಂಧವಿಲ್ಲವೆಂದು ತಿಳಿಸುತ್ತಾ ಇಸ್ಕಾನ್ ಸಂಸ್ಥೆಗೆ ಸಂಬಂಧಪಟ್ಟ ಜನರನ್ನು ಎದುರಿಗೆ ಕೂರಿಸಿಕೊಂಡು ನಾನು ಅಂತಹ ಯಾವುದೇ ಪತ್ರಿಕಾ ಹೇಳಿಕೆಯನ್ನು ಮಾಡಿಲ್ಲ. ನಾನು ಬಳ್ಳಾರಿಯಲ್ಲಿ ಕೇಳಿದ ಒಂದು ಪ್ರಶ್ನೆಗೆ ಉತ್ತರದ ರೂಪದಲ್ಲಿ ಇಂಥ ಒಂದು ಕಾರ್ಯಕ್ರಮವನ್ನು, ಇಂಥ ಒಂದು ಪ್ರಯೋಗಾತ್ಮಕವಾಗಿರುವ ಉತ್ತಮವಾದ ಆಹಾರವನ್ನು ಖೈದಿಗಳಿಗೆ ಕೊಡುವ ಕಾರಣಕ್ಕಾಗಿ ಇದನ್ನು ಮಾಡಿದ್ದಾರೆ. ಎಂದು ಹೇಳಿ, ಯಾವುದೇ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿಲ್ಲ ಎನ್ನವ ಮಾತನ್ನು ಹೇಳಿದ್ದಾರೆ. ಸದಸ್ಯರು ಮಾಡಿರುವ ಆಪಾದನೆಗಳ ಸತ್ಯಾಸತ್ಯತೆಗಳು ಕುರಿತಾಗಿ ತನಿಖೆ ಮಾಡುವುದಾಗಿ ಹೇಳಿದ್ದೇನೆ. ಇಲ್ಲಿಯವರೆಗೆ ತನಿಖೆ ಮಾಡಿಲ್ಲ ಏನ್ನವಂಥಾದ್ದು ಏನಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ತನಿಖೆಗೆ ಆದೇಶ ಮಾಡುವುದಕ್ಕೆ ಇವತ್ತಿಗೂ ಕೂಡ ಬದ್ದರಾಗಿದ್ದೇವೆ. ತನಿಖೆ ಮಾಡುವುದೆಂದು ಎಲ್ಲಿಯೂ ಕೂಡ ಹೇಳಿಲ್ಲ. ತನಿಖೆ ಮಾಡುವುದು ವಿಳಂಬವಾಗಿದೆ ವಿನಃ ಅದನ್ನು ನಿರಾಕರಿಸಿದ್ದೇವೆ. ಎನ್ನುವ ಪ್ರಶ್ನೆ ಬರುವುದಿಲ್ಲ. ಆದುದರಿಂದ, ಇದು ಹಕ್ಕುಚ್ಯುತಿ ಆಗುವುದಿಲ್ಲವೆಂದು ಸಮರ್ಥಿಸಿಕೊಂಡಿದ್ದಾರೆ.

ಹಕ್ಕುಚ್ಯತಿ ಸೂಚನೆ ಕೊಟ್ಟರುವ ಸದಸ್ಯರ ಅಭಿಪ್ರಾಯಗಳನ್ನು ಹಾಗೂ ಈ ಬಗ್ಗೆ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಗೃಹ ಸಚಿವರು ವ್ಯಕ್ತಪಡಿಸಿರುವ ಅಭಿಪ್ರಯಗಳನ್ನು ನಾನು ಕೇಳಿದ್ದೇನೆ, ಸಚಿವರ ಅಸಂಗತ ಹಾಗೂ ಗೊಂದಲಮಯ ಹೇಳಿಕೆಗಳು ಹಕ್ಕುಚ್ಯುತಿ ಆಗುವುದಿಲ್ಲವೆಂದು ಈ ಹಿಂದೆ ಇದೇ ಸದನದಲ್ಲಿ ಸಭಾಧ್ಯಕ್ಷರುಗಳು ಅನೇಕ ತೀರ್ಮಗಳನ್ನು ನೀಡಿರುತ್ತಾರೆ. ಉದಾಹರಣೆಗೆ ದಿನಾಂಕ 24–7–1967ರಂದು ಶಾಸಕರಾದ

ಶ್ರೀ ಕೆ.ಹೆಚ್. ಪಾಟೀಲ್ ಅವರು ಅಂದಿನ ಸಚಿವರಾಗಿದ್ದ

ಶ್ರೀ ಎಸ್.ಆರ್. ಕಂಠಿ ಅವರ ವಿರುದ್ಧ ಹಕ್ಕುಚ್ಯುತಿ ಸೂಚನೆ ನೀಡಿದಾಗ ಸಭಾಧ್ಯಕ್ಷರು ಈ ಕೆಳಕಂಡಂತೆ ತೀರ್ಪನ್ನು ನೀಡಿದ್ದಾರೆ.

"If there is any inaccurate statement or wrong information furnished by the Hon. Minister to the house, there is definite procedure to be adopted for rectifying such matters. It does not amount to be a breach of privilege."

(L.A.Debates, Vol. V, 24th July, 1967, pages 378-81).

ಅದೇ ರೀತಿ ದಿನಾಂಕ 4–4–1970ರಂದು ಸದಸ್ಯರಾದ ಶ್ರೀ ಹೆಚ್.ಎಂ.ಚನ್ನಬಸಪ್ಪ ಅವರು ಅಂದಿನ ಮುಖ್ಯಮಂತ್ರಿಯವರ ವಿರುದ್ಧ ನೀಡಿರುವ ಹಕ್ಕುಚ್ಯುತಿ ಸೂಚನೆ ಬಗ್ಗೆ ಸಭಾಧ್ಯಕ್ಷರು ಈ ಕೆಳಕಂಡಂತೆ ತೀರ್ಮ ನೀಡಿದ್ದಾರೆ.

"I have gone through the proceedings if the house when the particular question was answered in the house. I have also looked into the newspaper produced containing the statement reported to have been made by the Hon. Chief Minister at Belagaum. IT would appear that what the Chief Minister had stated at the conference is in a different context from what it was stated in the house. The Hon. Chief Minister has also categorically denied that he had made any such statement attributed to him. To constitute a breach of privilege, the statement must be a deliberate lie with an intention of misleading the house. In this case it is difficult to conceive of any such intention on the part of the Hon. Chief Minister. I therefore, hold that the notice is not order."

ಕೌಲ್ ಮತ್ತು ಶೇಖರ್‌ರವರ ಸಂಸದೀಯ ಕಾರ್ಯವಿಧಾನ ಹಾಗೂ ನಡವಳಿಕೆಗಳಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

"If any statement is made on the floor of the house by a member or Minister which another member believes to be untrue, incomplete or incorrect, it does not constitute a breach of privilege. If an incorrect statement is made, there are other remedies by which issue can be decided. In order to constitute a breach of privilege or contempt of the house, it has to be proved that the statement was not only wrong or misleading but it was made deliberately to mislead the house. A breach of privileges can arise only when the member or the Minister makes a false statement or incorrect statement willfully, deliberately and knowingly."

"Non-implementation of an assurance given by a Minister on the floor of the house is neither a breach of privilege nor a contempt of the house, for the process of the implementation of a policy matter is conditional on a number of facters contributing to such policy. In the Import Licenses Case, the Speaker inter alia ruled that the house "has various remedies available to it to call the Governmment to account and secure compliance with its directions, but inadequate compliance of an assurance or dealy in its fulfillment will not constitute a breach of privilege."

ಮೇಲ್ಕಾಣಿಸಿದ ಪ್ರಸ್ತಾವನೆಗಳ ಹಿನ್ನೆಲೆಯಲ್ಲಿ ಹಾಗೂ ಸಚಿವರು ಈ ಬಗ್ಗೆ ತನಿಖೆ ಮಾಡಲು ಇನ್ನೂ ಬದ್ಧವಾಗಿರುವುದಾಗಿ ತಿಳಿಸಿದ್ದು, ಆದರೆ ತನಿಖೆ ವಿಳಂಬವಾಗಿರುವ ಒಂದೇ ಒಂದು ಕಾರಣದ ಮೇಲೆ ಹಕ್ಕುಚ್ಯುತಿ ಆಗಲಾರದೆಂದು ತಿಳಿಸಿರುವುದರಿಂದ ಸದರಿ ವಿಷಯ ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲವೆಂದು ಸದಸ್ಯರು ನೀಡಿರುವ ಹಕ್ಕುಚ್ಯುತಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ.

ಉಪಾಧ್ಯಕ್ಷರು: ಈಗ ಸದನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ. (ಸದನವನ್ನು ರಾತ್ರಿ 8.35 ಗಂಟೆಗೆ ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಲಾಯಿತು)